ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ : 07 ನೇ ಡಿಸೆಂಬರ್, 2020

ರಾಯಚೂರು ವಿಶ್ವವಿದ್ಯಾಲಯದ ಮಾಹಿತಿ ಕುರಿತು

ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ) –

64 (78) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ನೂತನ ವಿಶ್ವವಿದ್ಯಾಲಯ ಯಾವಾಗ ಪ್ರಾರಂಭವಾಗಿದೆ; ಈ ವಿಶ್ವವಿದ್ಯಾಲಯವು ಸ್ವಂತ ಕಟ್ಟಡವನ್ನು ಹೊಂದಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಆ) ಈ ವಿಶ್ವವಿದ್ಯಾಲಯಕ್ಕೆ ಸರಕಾರದಿಂದ ಮಂಜೂರಾದ ಜಮೀನು ಎಷ್ಟು; ಈ ವಿ.ವಿ. ಯ ವ್ಯಾಪ್ತಿ ಎಷ್ಟು ಹಾಗೂ ಸರಕಾರದಿಂದ ಇನ್ನುಳಿದ ಜಮೀನನ್ನು ಯಾವಾಗ ಒದಗಿಸಲಾಗುವುದು;

(ಇ) ಸದರಿ ವಿಶ್ವವಿದ್ಯಾಲಯದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳು ಇವೆಯೇ; ಹಾಗಾದರೆ, ಇಲ್ಲಿಯವರೆಗೆ ಸರಕಾರದಿಂದ ಒದಗಿಸಿದ ಅನುದಾನ ಎಷ್ಟು;

(ಈ) ಸದರಿ ವಿಶ್ವವಿದ್ಯಾಲಯದಲ್ಲಿ ಭೋದಕ ಮತ್ತು ಭೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಉ) ಈ ವಿಶ್ವವಿದ್ಯಾಲಯದಲ್ಲಿ ಭೋದಿಸುವ ಸ್ನಾತಕ, ಸ್ನಾತಕೊತ್ತರ ವಿಷಯಗಳು ಯಾವುವು?